**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :9 ಸಿಡಬ್ಲು :11

ಸಾಕ್ಷಿಯ ಹೆಸರು : ಶ್ರೀ ಶಿವಾನಂದ ಶ್ರೀಮಂತ ಬಾವಿಮನಿ
ಗಂಡನ ಹೆಸರು : ಶ್ರೀ ಶ್ರೀಮಂತ ಬಾವಿಮನಿ
ವಯಸ್ಸು : 32 ವರ್ಷ
ಉದ್ಯೋಗ : ಶಿಕ್ಷಕರು, ಮೌಲಾನ ಅಜಾದ ಮಾಡೆಲ ಸ್ಕೂಲ, ಕುಡಚಿ
ವಾಸ್ತವ್ಯ : ಮುಗಳಖೋಡ
ದಿನಾಂಕ : 18-01-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1, ಚಾಸಾಃ 8 ರಿಂದ ಚಾಸಾಃ 10, ಚಾಸಾಃ 12 ರಿಂದ ಚಾಸಾಃ 17 ರವರು ಸಂಬಂಧಿಕರು, ಚಾಸಾಃ 18 ರಿಂದ ಚಾಸಾಃ 31 ರವರು ನಮ್ಮ ಸಮಾಜದವರು. ನಮ್ಮದು ಹಿಂದೂ ಮಾದರ ಜಾತಿಯಾಗಿರುತ್ತದೆ. ಚಾಸಾಃ 37 ರಿಂದ ಚಾಸಾಃ 39 ಪಂಚಾಯತಿಯ ಸಿಬ್ಬಂದಿಯಾಗಿರುತ್ತಾರೆ. ಚಾಸಾಃ 40 ಮತ್ತು ಚಾಸಾಃ 41 ಪರಿಚಯ ಇರುವುದಿಲ್ಲ. ಚಾಸಾಃ 42 ಮತ್ತು 43 ಪರಿಚಯಸ್ಥರು. ಚಾಸಾಃ 44 ಪುರಸಭೆಯ ಮುಖ್ಯಾಧಿಕಾರಿಗಳಾಗಿದ್ದರು. ಈ ದಿನ ನ್ಯಾಯಾಲಯದ ಮುಂದೆ ಹಾಜರು ಇರುವ 2, 3, 6 ರಿಂದ 9, 26 ಮತ್ತು 33 ಆರೋಪಿತರವರು ಪರಿಚಯ. ಈ ದಿನ ನ್ಯಾಯಾಲಯಕ್ಕೆ ಆರೋಪಿ ನಂ.1, 4, 5, 11 ರಿಂದ 14, 16 ರಿಂದ 20, 22 ರಿಂದ 25, 27, 28, 31, 32 ಮತ್ತು 34 ರವರು ಗೈರು ಹಾಜರಾಗಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು, ಸದರಿ ವಿನಾಯಿತಿ ಅರ್ಜಿಯಲ್ಲಿ ಆರೋಪಿತರ ಗುರುತಿಸುವಿಕೆಗೆ ತಕರಾರು ಇಲ್ಲ ಹಾಗೂ ಅವರ ಗೈರು ಹಾಜರಾತಿಯಲ್ಲಿ ಮಾನ್ಯ ನ್ಯಾಯಾಲಯವು ಸಾಕ್ಷಿಯನ್ನು

ತೆಗೆದುಕೊಳ್ಳಬಹುದು ಎಂದು ವಿನಾಯಿತಿ ಅರ್ಜಿಯಲ್ಲಿ ಸಲ್ಲಿಸಿರುವುದರಿಂದ ಅದನ್ನು ಪುರಸ್ಕರಿಸಲಾಗಿರುತ್ತದೆ. ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾದ ಆರೋಪಿತರನ್ನು ನಾನು ಮತ್ತೆ ನೋಡಿದರೆ ಗುರುತಿಸಬಲ್ಲೆ. ಈ ಪ್ರಕರಣದ ಆರೋಪಿತರ ಪೈಕಿ ಆರೋಪಿ ನಂಬರ 27 ಮತ್ತು 28 ಕುರುಬ ಜಾತಿಗೆ ಸೇರಿದವರು, ಆರೋಪಿ ನಂಬರ 29 ಲಿಂಗಾಯತ ಜಾತಿಯವರು ಹಾಗೂ ಇನ್ನೂಳಿದ ಎಲ್ಲಾ ಆರೋಪಿತರು ಜೈನ ಸಮಾಜದವರಾಗಿರುತ್ತಾರೆ.

2. ಮುಗಳಖೋಡದಲ್ಲಿರುವ ಸರ್ಕಾರಿ ಗಾಂವಟಾನ ಜಾಗದ ಸಂಬಂಧ ನಮ್ಮ ಮತ್ತು ಆರೋಪಿತರ ಮಧ್ಯೆ ಜಗಳವಾಗಿರುತ್ತದೆ. ದಿಃ26.08.2017 ರಂದು ನಾನು ಮನೆಯಲ್ಲಿದ್ದಾಗ ಚಾಸಾಃ 31 ರವರು ಮುಂಜಾನೆ 10.00 ಗಂಟೆ ಸುಮಾರಿಗೆ 300-400 ಜನ ಜೈನ ಸಮಾಜದವರು ಗಾಂವಟಾನ ಜಾಗಕ್ಕೆ ಬಂದು ನನ್ನ ಮುಂದೆ ಹೇಳಿದ್ದೇನೆಂದರೆ ಗಾಂವಟಾನ ಜಾಗದಲ್ಲಿ ಜೈನ ಸಮಾಜದವರು ಕಟ್ಟಡ ಕೆಲಸ ಪ್ರಾರಂಭ ಮಾಡಿರುತ್ತಾರೆ, ಈ ವಿಷಯವನ್ನು ನನಗೆ ತಿಳಿಸಲು ಮತ್ತು ಪುರಸಭೆಗೆ ಬರಲು ಹಿರಿಯರು ಹೇಳಿರುತ್ತಾರೆ ಎಂದು ವಿಷಯವನ್ನು ತಿಳಿಸಿದ್ದು ಆಗ ನಾನು ಮತ್ತು ನಮ್ಮ ಸಮಾಜದ 20 ಜನರು ಪುರಸಭೆಗೆ ಹೋಗಿ ಮುಖ್ಯಾಧಿಕಾರಿಗಳಾದಂತಹ ಚಾಸಾಃ 35 ರವರ ಹತ್ತಿರ ಹೋಗಿ ವಿಷಯವನ್ನು ತಿಳಿಸಿದ್ದು, ಆಗ ಸದರಿ ಅಧಿಕಾರಿಗಳು ತಮ್ಮ ಸಿಬ್ಬಂದಿಯವರನ್ನು ಕರೆದು ಯಾವ ಕಾರಣಕ್ಕೆ ಎಲ್ಲಾ ಜನರು ಬಂದಿರುತ್ತಾರೆ ಎಂದು ಅವರನ್ನು ವಿಚಾರಣೆ ಮಾಡಿದಾಗ ಗಾಂವಟಾನ ಜಾಗಕ್ಕೆ ಸಂಬಂಧಿಸಿದಂತೆ ಜೈನ ಸಮಾಜ ಮತ್ತು ಮಾದಿಗ ಸಮಾಜದ ಮಧ್ಯೆ ತಕರಾರು ಇದ್ದು ಈ ವಿಚಾರವಾಗಿ ನೀವು ಏನು ಕ್ರಮ ಕೈಗೊಂಡಿದ್ದಿರಿ ಎಂದು ಸದರಿ ಸಿಬ್ಬಂದಿಯವರನ್ನು ಕೇಳಿದಾಗ ಈ ಮೊದಲಿನ ಪುರಸಭೆಯ ಮುಖ್ಯಾಧಿಕಾರಿಗಳು ಈಗಾಗಲೇ ನಮ್ಮ ಕೈಯಲ್ಲಿ ನೋಟಿಸ ಕೊಡಲು ಕಳುಹಿಸಿದ್ದು ಆಗ ನಾವು ಜೈನ ಸಮಾಜದವರ ಹತ್ತಿರ ನೋಟಿಸ ತೆಗೆದುಕೊಂಡು ಹೋಗಿದ್ದು ಅವರು ತೆಗೆದುಕೊಳ್ಳಲಿಲ್ಲ ಅಂತಾ ಹೇಳಿದರು. ಸದರಿಯವರು ನೀವು ಖುದ್ದಾಗಿ ನೋಟಿಸ ಕೊಡಲು

ಹೋದಾಗ ತೆಗೆದುಕೊಳ್ಳದೇ ಇದ್ದ ಸಂದರ್ಭದಲ್ಲಿ ಅಂಚೆ ಮುಖಾಂತರ ಅವರಿಗೆ ನೋಟಿಸ ಕಳುಹಿಸಬಹುದಿತ್ತಲ್ಲವೇ ಎಂದು ಪ್ರಶ್ನಿಸಿದರು, ಆಗ ನಾವು ಈಗಾಗಲೇ ನೋಟಿಸನ್ನು ಜೈನ ಸಮಾಜದವರಿಗೆ ಅಂಚೆ ಮುಖಾಂತರ ಕಳುಹಿಸಿದ್ದು ಅದನ್ನು ಸಹ ಸ್ವೀಕಾರ ಮಾಡಿರಲಿಲ್ಲ ಎಂದು ತಿಳಿಸಿದರು.

3. ಸದರಿಯವರು ನೋಟಿಸನ್ನು ಖುದ್ದಾಗಿ ಸ್ವೀಕಾರ ಮಾಡದೇ ಹಾಗೂ ಅಂಚೆ ಮುಖಾಂತರ ಸ್ವೀಕಾರ ಮಾಡದೇ ಇದ್ದಾಗ ನೀವು ಸದರಿಯವರ ಮನೆಯ ಹತ್ತಿರ ಹೋಗಿ ಅವರ ಗೋಡೆಗೆ ನೋಟಿಸನ್ನು ಅಂಟಿಸಿ ಬರಬಹುದಿತ್ತಲ್ಲವೇ ಎಂದು ಕೇಳಿದಾಗ ಅವರ ಪೈಕಿ ಒಬ್ಬ ಸಿಬ್ಬಂದಿ ಯಮನಪ್ಪ ದೇವನ್ನವರ ನಾವು ಗೋಡೆಗೆ ನೋಟಿಸನ್ನು ಅಂಟಿಸಿ ಬಂದಿರುತ್ತೇವೆ ಎಂದು ಹೇಳಿದರು ಅವರ ಪೈಕಿ ಇನ್ನೊಬ್ಬ ಸಿಬ್ಬಂದಿ ನಾವು ಹೋಗಿ ಅವರ ಗೋಡೆಗೆ ನೋಟಿಸನ್ನು ಅಂಟಿಸಿ ಬಂದಿಲ್ಲ ಎಂದು ಹೇಳಿದರು.

4. ಆಗ ಆಗಿನ ಪುರಸಭೆಯ ಆಡಳಿತಾಧಿಕಾರಿಗಳು ನಮ್ಮನ್ನು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡೋಣ ಬಾ ಎಂದು ನಮ್ಮನ್ನು ಕರೆದರು ಆಗ ನಾವು ಅವರಿಗೆ ತಿಳಿಸಿದ್ದೇನೆಂದರೆ ಈಗಾಗಲೇ 400-500 ಜನ ಸ್ಥಳದಲ್ಲಿ ಬಂದಿದ್ದು ಅವರು ನಮ್ಮೊಂದಿಗೆ ಜಗಳ ತೆಗೆಯಬಹುದು ಆದ ಕಾರಣ ನಾವು ಬರುವುದಿಲ್ಲ ನೀವಷ್ಟೆ ಹೋಗಿ ಬನ್ನಿ ಅಂತಾ ಅವರಿಗೆ ತಿಳಿಸಿದೇವು. ಆಗ ಸದರಿ ಅಧಿಕಾರಿಯು ನಾನು ಸರ್ಕಾರಿ ಅಧಿಕಾರಿ ಇದ್ದು ಒಂದು ವೇಳೆ ಅವರೇನಾದರೂ ತೊಂದರೆ ಮಾಡುವುದಾದರೆ ನಾನು ಪೋಲಿಸರ ಸಹಾಯವನ್ನು ತೆಗೆದುಕೊಂಡು ನಿಮಗೆ ರಕ್ಷಣೆ ನೀಡುತ್ತೇನೆ ಆದ ಕಾರಣ ಎಲ್ಲರೂ ಹೋಗೋಣ ಬನ್ನಿ ಎಂದು ನಮ್ಮನ್ನು ಕರೆದರು, ಆಗ ನಾವು ಹೋಗೋಣ ಎಂದು ತಯಾರಾಗಿದ್ದೇವು. ಆಗ ಪುರಸಭೆಯ ಅಧ್ಯಕ್ಷರಾದ ಚಾಸಾಃ 36 ರವರನ್ನು ಸ್ಥಳಕ್ಕೆ ಬರಲು ಮುಖ್ಯ ಆಡಳಿತಾಧಿಕಾರಿಗಳು ತಿಳಿಸಿದ್ದು ಆಗ ಪುರಸಭೆ ಕಛೇರಿಯಿಂದ ಅಧ್ಯಕ್ಷರು, ಮುಖ್ಯ ಆಡಳಿತಾಧಿಕಾರಿಗಳು, ಸಿಬ್ಬಂದಿಗಳು ಹಾಗೂ ನಮ್ಮ ಸಮಾಜದ 30 ಜನರು ಅಲ್ಲಿಂದ ಗಾಂವಟಾನ ಜಾಗಕ್ಕೆ ಬಂದೇವು.

5. ಆಗ ಮುಖ್ಯಾಧಿಕಾರಿಗಳು ಗಾಂವಟಾನ ಜಾಗದಲ್ಲಿ ಕೆಲಸ ಮಾಡುತ್ತಿದ್ದಂತಹ ಜೈನ ಸಮಾಜದವರಿಗೆ ನಿಮಗೆ ಈಗಾಗಲೇ ನೋಟಿಸ ನೀಡಿದ್ದು ನೀವು ಇಲ್ಲಿ ಕಟ್ಟಡ ಕಟ್ಟಬಾರದೆಂದು ಇದ್ದು ನೀವು ಏಕೆ ಇಲ್ಲಿ ಕಟ್ಟಡ ಕಟ್ಟುತ್ತಿದ್ದಿರಿ ಎಂದು ಹೇಳಿದ್ದು ಆಗ ಅಲ್ಲಿದ್ದ ಜೈನ ಸಮಾಜದವರ ಪೈಕಿ 3-4 ಮಂದಿ ಎಂದರೆ ಪ್ರವೀಣ ಆದಪ್ಪಗೋಳ, ಅರಿಹಂತ ಬಾಬಣ್ಣವರ ಇನ್ನಿಬ್ಬರೂ ಸೇರಿ ಸದರಿ ಅಧಿಕಾರಿಗೆ ನೀನೇನು ಅಧಿಕಾರಿಯೋ ಈಗಾಗಲೇ ನಮ್ಮ ಹೆಸರಿನಲ್ಲಿ ಠರಾವು ಪಾಸು ಮಾಡಿಕೊಂಡಿದ್ದೇವೆ ನಿಮ್ಮ ಪುರಸಭೆ ಪುಸ್ತಕದಲ್ಲಿ ಆದೇಶ ಮೆರೆಯುತ್ತದೆ ನೀನು ಅಲ್ಲಿ ಹೋಗಿ ನೋಡು ಅಂತಾ ಹೇಳಿದರು ಹಾಗೂ ಈ ಮಾದರ ಸೂಳೆಮಕ್ಕಳ ಮಾತು ಕೇಳಿ ಇಲ್ಲಿ ಬಂದಿ ಏನು ಅಂತಾ ಅಂದರು, ಆಗ ನಮಗೂ ಸಹ ಈ ಮಾದರ ಸೂಳೆಮಕ್ಕಳು ಎಷ್ಟು ಕಾಡತಾ ಇದಿರಿ ಅಂತಾ ಅಂದರು.

6. ಅಲ್ಲೇ ದಂಡೆಯ ಮೇಲೆ ಚಾಸಾಃ 32 ರವರು ನಿಂತುಕೊಂಡಿದ್ದು ಆತನ ಕಾಲು ಜಾರಿ ಆಗ ಜೈನ ಸಮಾಜದವರು ನಿಂತುಕೊಂಡಿದ್ದು ಆಗ ಕಲ್ಲುಗಳು ಕೆಳಗಡೆ ಉರುಳಿದವು ಆಗ ಏಕಾಏಕಿ ಜೈನ ಸಮಾಜದವರು ಎಲ್ಲರೂ ಸೇರಿ ಅವರನ್ನು ತೊಗೊಳ್ಳಿ ಅಂತಾ ಹೇಳಿದಾಗ ಅವರ ಪೈಕಿ 4 ಜನರು ಮೇಲೆ ಬಂದು ಚಾಸಾಃ 1 ರವರ ಅಂಗಿ ಹಿಡಿದು ಜಗ್ಗಾಡಲು ಪ್ರಾರಂಭ ಮಾಡಿದ್ದು ಆಗ ನಾನು ಮಧ್ಯ ಹೋಗಿ ಬಿಡ್ರಿ ಬಿಡ್ರಿ ಅಂತಾ ಬಿಡಿಸಲು ಹೋದಾಗ 7 ನೇ ಆರೋಪಿ ಬಡಿಗೆ ತೆಗೆದುಕೊಂಡು ಬಂದು ನನ್ನ ತಲೆಯ ಮೇಲೆ ಹೊಡೆದರು, ಆಗ ನಾನು ಕೆಳಗೆ ಕುಳಿತು ತೆವಳುತ್ತಾ ಮುಂದೆ ಹೋಗಿ ರಸ್ತೆ ಬದಿಗೆ ಕುಳಿತುಕೊಂಡೆ. ಆಗ ಚಾಸಾಃ 1 ಇತನಿಗೆ ಹೊಡೆ ಬಡೆ ಮಾಡಲು ಪ್ರಾರಂಭ ಮಾಡಿದರು. ನನಗೆ ತಲೆಗೆ ಪೆಟ್ಟಾಗಿ ರಕ್ತ ಬರುತ್ತಿತ್ತು ನನ್ನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂದು ನಮ್ಮ ಮನೆಯವರು ನನ್ನನ್ನು ಮೋಟರಸೈಕಲ ಮೇಲೆ ಹಾರೂಗೇರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ವೈದ್ಯರು ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ನಾರಗೊಂಡ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇನೆ. ಚಾಸಾಃ 1 ರವರು ಘಟನೆ ಬಗ್ಗೆ ಪೋಲಿಸರಿಗೆ ದೂರು ನೀಡಿರುತ್ತಾರೆ. ನಾನು ನಾರಗೊಂಡ ಆಸ್ಪತ್ರೆಯಲ್ಲಿ ಚಿಕಿತ್ಸೆ

ಪಡೆಯುತ್ತಿದ್ದಾಗ ಅಥಣಿ ಡಿ.ವೈ.ಎಸ್.ಪಿ ರವರು ಭೇಟಿ ಕೊಟ್ಟು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಆ ದಿನ ಶ್ರೀಕಾಂತ ಬಾಬಣ್ಣವರ ನನ್ನ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ಬಿದಿರು ಬಡಿಗೆಯನ್ನು ನೋಡಿದರೆ ಗುರುತಿಸಬಹುದು ಎಂದು ಸಾಕ್ಷಿ ನುಡಿದಿದ್ದು. ಈಗಾಗಲೇ ಗುರುತಿಸಲಾದಂತಹ ಎಮ್.ಓ.1 ಬಿದಿರಿನ ಬಡಿಗೆಯನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ. ಚಾಸಾಃ 1 ಹಾಗೂ ಇನ್ನೂಳಿದವರಿಗೆ ಗಾಯಗಳಾಗಿದ್ದು ಅವರನ್ನೂ ಸಹ ನಾರಗೊಂಡ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲು ಮಾಡಲಾಗಿತ್ತು.

**ಪಾಟೀ ಸವಾಲು: 1 ಮತ್ತು 2ನೇ ಆರೋಪಿತರ ಪರವಾಗಿ ಶ್ರೀ. ಬಿ.ಜೆ.ಜಿ. ವಕೀಲರಿಂದ**

ನಾನು 2013 ರಲ್ಲಿ ಬಿ.ಇಡಿ ಪದವಿ ಮುಗಿಸಿರುತ್ತೇನೆ. ನಮ್ಮ ಸಮಾಜದಲ್ಲಿ ನಾನು ಹೆಚ್ಚಿನ ವಿದ್ಯಾವಂತ ಎಂದರೆ ಸರಿ. ಈ ಮೊದಲಿನ ಪುರಸಭೆಯ ಮುಖ್ಯಾಧಿಕಾರಿಗಳು ಈಗಾಗಲೇ ನಮ್ಮ ಕೈಯಲ್ಲಿ ನೋಟಿಸ ಕೊಡಲು ಕಳುಹಿಸಿದ್ದು ಆಗ ನಾವು ಜೈನ ಸಮಾಜದವರ ಹತ್ತಿರ ನೋಟಿಸ ತೆಗೆದುಕೊಂಡು ಹೋಗಿದ್ದು ಅವರು ತೆಗೆದುಕೊಳ್ಳಲಿಲ್ಲ ಅಂತಾ ಹೇಳಿದರು, ಸದರಿಯವರು ನೀವು ಖುದ್ದಾಗಿ ನೋಟಿಸ ಕೊಡಲು ಹೋದಾಗ ತೆಗೆದುಕೊಳ್ಳದೇ ಇದ್ದ ಸಂದರ್ಭದಲ್ಲಿ ಅಂಚೆ ಮುಖಾಂತರ ಅವರಿಗೆ ನೋಟಿಸ ಕಳುಹಿಸಬಹುದಿತ್ತಲ್ಲವೇ ಎಂದು ಪ್ರಶ್ನಿಸಿದರು, ಆಗ ನಾವು ಈಗಾಗಲೇ ನೋಟಿಸನ್ನು ಜೈನ ಸಮಾಜದವರಿಗೆ ಅಂಚೆ ಮುಖಾಂತರ ಕಳುಹಿಸಿದ್ದು ಅದನ್ನು ಸಹ ಸ್ವೀಕಾರ ಮಾಡಿರಲಿಲ್ಲ ಎಂದು ತಿಳಿಸಿದರು ಎನ್ನುವ ವಿಷಯವನ್ನು ಈ ಮೊದಲು ಪೋಲಿಸರ ಮುಂದೆ ಹೇಳಿರುವುದಿಲ್ಲ ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳಿರುತ್ತೇನೆ ಎಂದರೆ ಸರಿಯಲ್ಲ.

2. 2017 ರಿಂದ ಇಲ್ಲಿಯವರೆಗೆ ಯಾರ ಹೆಸರಿನಲ್ಲಿ ಸದರಿ ಜಾಗ ಇದೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಯಾರಿಗೆ ಕಟ್ಟಡ ಕಟ್ಟಲು ಅನುಮತಿ ನೀಡಲಾಗಿದೆ ಎನ್ನುವ ಬಗ್ಗೆ

ದಾಖಲೆಗಳನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ಗಾಂವಟಾನ ಜಾಗ ನಮ್ಮ ಹಿರಿಯರ ಕಾಲದಿಂದ ನಾವು ಕಬ್ಜಾ ವಹಿವಾಟದಲ್ಲಿದ್ದು ಅದರ ಬಗ್ಗೆ ಪುರಸಭೆ ಅಧಿಕಾರಿಗಳಿಗೆ ಗಾಂವಟಾನ ಜಾಗದ ಬಗ್ಗೆ ಮಾಹಿತಿ ನೀಡಿ ಎಂದು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಗಾಂವಟಾನ ಜಾಗದ ಬಗ್ಗೆ ದಾಖಲೆಗಳನ್ನು ನೀಡಿ ಎಂದು ಪುರಸಭೆ ಕಛೇರಿಗೆ ನಾನು ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಈ ಮೊದಲು ಜೈನ ಸಮಾಜದವರಿಗೆ ಸದರಿ ಜಾಗದಲ್ಲಿ ಕಟ್ಟಡ ಕಟ್ಟಲು ಅನುಮತಿ ಕೊಟ್ಟಿದ್ದು ತದನಂತರ ಸದರಿ ಅನುಮತಿಯನ್ನು ರದ್ದು ಮಾಡಲಾಗಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನಾನು ಪುರಸಭೆ ಅಧಿಕಾರಿಗಳಿಗೆ ನೀಡಿರುವುದಿಲ್ಲ.

3. ವಿಪಿಸಿ ನಂಬರ 643 ಗಾಂವಟಾನ ಜಾಗವನ್ನು ಬಾಬಣ್ಣವರ ಕುಟುಂಬದವರಿಗೆ ಸಂಬಂಧಪಟ್ಟಿದ್ದು ಮತ್ತು ಅದನ್ನು ಅವರ ಕುಟುಂಬದವರ ಹೆಸರಿನಲ್ಲಿ ಪುರಸಭೆ ಕಛೇರಿಯವರು ಮಾಡಿಕೊಟ್ಟಿರುತ್ತಾರೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿ ಸದರಿ ವಿಷಯ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಿಪಿಸಿ ನಂಬರ 643 ಗಾಂವಟಾನ ಜಾಗವನ್ನು ಶ್ರೀಮಂತ ಬಾಬಣ್ಣವರ, ರಾವಸಾಬ ಬಾಬಣ್ಣವರ, ನೇಮಿನಾಥ ಬಾಬಣ್ಣವರ ಮತ್ತು ಲಕ್ಷ್ಮಣ ಬಾಬಣ್ಣರವರ ವಾರಸುದಾರವರ ಹೆಸರಿಗೆ ದಾಖಲಾತಿಗಳಾಗಿದ್ದು ಸದರಿಯವರು ಪುರಸಭೆಗೆ ಕಟ್ಟಡ ಕಟ್ಟಲು ಅನುಮತಿ ಪಡೆಯಲು ಹಣ ಪಾವತಿ ಮಾಡಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ಕರವನ್ನು ಕಟ್ಟುತ್ತಾ ಬಂದಿದ್ದರಿಂದ ಸದರಿಯವರಿಗೆ ಪುರಸಭೆಯವರು ಕಟ್ಟಡ ಕಟ್ಟಲು ಅನುಮತಿ ನೀಡಿದ್ದರು ಎಂದರೆ ಸರಿಯಲ್ಲ.

4. ದೋಷಾರೋಪಣೆ ಪುಟ ಸಂಖ್ಯೆ 43 ಮತ್ತು 44 ರಲ್ಲಿ ಕಂಡುಬರುವ ಪೋಟೋಗಳಲ್ಲಿರುವ ಕಟ್ಟಡವನ್ನು ಈ ಘಟನೆಯಾಗುವ ಕೆಲವು ದಿವಸಗಳ ಮುಂಚೆ ಕಟ್ಟಲು ಪ್ರಾರಂಭ ಮಾಡಿದ್ದರು ಎಂದು ನುಡಿಯುತ್ತಾರೆ. ನಾವು ಕಬ್ಜಾದಲ್ಲಿದ್ದಂತಹ ಜಾಗದಲ್ಲಿ ಬಾಬಣ್ಣವರವರ ಕುಟುಂಬದವರು ಕಟ್ಟಡವನ್ನು ಕಟ್ಟುತ್ತಿದ್ದಾರೆ ಅದು ನಮ್ಮ ಜಾಗ ಎಂದು

ತೋರಿಸಲು ವಕೀಲರು ಮುಖಾಂತರ ಪುರಸಭೆಗಾಗಲೀ ಬಾಬಣ್ಣರವರ ಕುಟುಂಬದವರಿಗಾಗಲೀ ನೋಟಿಸನ್ನು ನೀಡಿರುವುದಿಲ್ಲ.

5. ಶ್ರೀಕಾಂತ ಬಾಬಣ್ಣವರ ಬಡಿಗೆಯಿಂದ ನನ್ನ ತಲೆಗೆ ಹೊಡೆದಾಗ ತಲೆಗೆ ಪೆಟ್ಟಾಗಿ ರಕ್ತ ಬಂದು ನನ್ನ ಅಂಗಿಗೆ ತಾಗಿತ್ತು. ರಕ್ತ ಹತ್ತಿದ ಶರ್ಟನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುವುದಿಲ್ಲ. ನಮ್ಮ ಊರಿನಿಂದ ಹಾರೂಗೇರಿ 10 ಕಿ.ಮೀ ಆಗುತ್ತದೆ. ನನಗಾದ ಗಾಯಕ್ಕೆ ಹಾರೂಗೇರಿ ಸರ್ಕಾರಿ ಆಸ್ಪತ್ರೆಯಲ್ಲಿ ಬ್ಯಾಂಡೇಜ ಮತ್ತು ಹೊಲಿಗೆಯನ್ನು ಹಾಕಿರುವುದಿಲ್ಲ. ಹಾರೂಗೇರಿ ಸರ್ಕಾರಿ ಆಸ್ಪತ್ರೆಯಿಂದ ನಾರಗೊಂಡ ಆಸ್ಪತ್ರೆ ಒಂದು ಕಿಲೋಮೀಟರ ದೂರದಲ್ಲಿ ಇರುತ್ತದೆ.

6. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತ ವಿಷಯ ಎಲ್ಲಾ ವಿಷಯ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಮುಗಳಖೋಡದಲ್ಲಿರುವ ಸರ್ಕಾರಿ ಗಾಂವಟಾನ ಜಾಗದ ಸಂಬಂಧ ನಮ್ಮ ಮತ್ತು ಆರೋಪಿತರ ಮಧ್ಯೆ ಜಗಳವಾಗಿರುತ್ತದೆ, ದಿಃ26.08.2017 ರಂದು ನಾನು ಮನೆಯಲ್ಲಿದ್ದಾಗ ಚಾಸಾಃ 31 ರವರು ಮುಂಜಾನೆ 10.00 ಗಂಟೆ ಸುಮಾರಿಗೆ 300-400 ಜನ ಜೈನ ಸಮಾಜದವರು ಗಾಂವಟಾನ ಜಾಗಕ್ಕೆ ಬಂದು ನನ್ನ ಮುಂದೆ ಹೇಳಿದ್ದೇನೆಂದರೆ ಗಾಂವಟಾನ ಜಾಗದಲ್ಲಿ ಜೈನ ಸಮಾಜದವರು ಕಟ್ಟಡ ಕೆಲಸ ಪ್ರಾರಂಭ ಮಾಡಿರುತ್ತಾರೆ, ಈ ವಿಷಯವನ್ನು ನನಗೆ ತಿಳಿಸಲು ಮತ್ತು ಪುರಸಭೆಗೆ ಬರಲು ಹಿರಿಯರು ಹೇಳಿರುತ್ತಾರೆ ಎಂದು ವಿಷಯವನ್ನು ತಿಳಿಸಿದ್ದು ಆಗ ನಾನು ಮತ್ತು ನಮ್ಮ ಸಮಾಜದ 20 ಜನರು ಪುರಸಭೆಗೆ ಹೋಗಿ ಮುಖ್ಯಾಧಿಕಾರಿಗಳಾದಂತಹ ಚಾಸಾಃ 35 ರವರ ಹತ್ತಿರ ಹೋಗಿ ವಿಷಯವನ್ನು ತಿಳಿಸಿದ್ದು, ಆಗ ಸದರಿ ಅಧಿಕಾರಿಗಳು ತಮ್ಮ ಸಿಬ್ಬಂದಿಯವರನ್ನು ಕರೆದು ಯಾವ ಕಾರಣಕ್ಕೆ ಎಲ್ಲಾ ಜನರು ಬಂದಿರುತ್ತಾರೆ ಎಂದು ಅವರನ್ನು ವಿಚಾರಣೆ ಮಾಡಿದಾಗ ಗಾಂವಟಾನ ಜಾಗಕ್ಕೆ ಸಂಬಂಧಿಸಿದಂತೆ ಜೈನ ಸಮಾಜ ಮತ್ತು ಮಾದಿಗ ಸಮಾಜದ ಮಧ್ಯೆ ತಕರಾರು ಇದ್ದು ಈ ವಿಚಾರವಾಗಿ ನೀವು ಏನು ಕ್ರಮ ಕೈಗೊಂಡಿದ್ದಿರಿ

ಎಂದು ಸದರಿ ಸಿಬ್ಬಂದಿಯವರನ್ನು ಕೇಳಿದಾಗ ಈ ಮೊದಲಿನ ಪುರಸಭೆಯ ಮುಖ್ಯಾಧಿಕಾರಿಗಳು ಈಗಾಗಲೇ ನಮ್ಮ ಕೈಯಲ್ಲಿ ನೋಟಿಸ ಕೊಡಲು ಕಳುಹಿಸಿದ್ದು ಆಗ ನಾವು ಜೈನ ಸಮಾಜದವರ ಹತ್ತಿರ ನೋಟಿಸ ತೆಗೆದುಕೊಂಡು ಹೋಗಿದ್ದು ಅವರು ತೆಗೆದುಕೊಳ್ಳಲಿಲ್ಲ ಅಂತಾ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಸದರಿಯವರು ನೀವು ಖುದ್ದಾಗಿ ನೋಟಿಸ ಕೊಡಲು ಹೋದಾಗ ತೆಗೆದುಕೊಳ್ಳದೇ ಇದ್ದ ಸಂದರ್ಭದಲ್ಲಿ ಅಂಚೆ ಮುಖಾಂತರ ಅವರಿಗೆ ನೋಟಿಸ ಕಳುಹಿಸಬಹುದಿತ್ತಲ್ಲವೇ ಎಂದು ಪ್ರಶ್ನಿಸಿದರು, ಆಗ ನಾವು ಈಗಾಗಲೇ ನೋಟಿಸನ್ನು ಜೈನ ಸಮಾಜದವರಿಗೆ ಅಂಚೆ ಮುಖಾಂತರ ಕಳುಹಿಸಿದ್ದು ಅದನ್ನು ಸಹ ಸ್ವೀಕಾರ ಮಾಡಿರಲಿಲ್ಲ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಸದರಿಯವರು ನೋಟಿಸನ್ನು ಖುದ್ದಾಗಿ ಸ್ವೀಕಾರ ಮಾಡದೇ ಹಾಗೂ ಅಂಚೆ ಮುಖಾಂತರ ಸ್ವೀಕಾರ ಮಾಡದೇ ಇದ್ದಾಗ ನೀವು ಸದರಿಯವರ ಮನೆಯ ಹತ್ತಿರ ಹೋಗಿ ಅವರ ಗೋಡೆಗೆ ನೋಟಿಸನ್ನು ಅಂಟಿಸಿ ಬರಬಹುದಿತ್ತಲ್ಲವೇ ಎಂದು ಕೇಳಿದಾಗ ಅವರ ಪೈಕಿ ಒಬ್ಬ ಸಿಬ್ಬಂದಿ ಯಮನಪ್ಪ ದೇವನ್ನವರ ನಾವು ಗೋಡೆಗೆ ನೋಟಿಸನ್ನು ಅಂಟಿಸಿ ಬಂದಿರುತ್ತೇವೆ ಎಂದು ಹೇಳಿದರು ಅವರ ಪೈಕಿ ಇನ್ನೊಬ್ಬ ಸಿಬ್ಬಂದಿ ನಾವು ಹೋಗಿ ಅವರ ಗೋಡೆಗೆ ನೋಟಿಸನ್ನು ಅಂಟಿಸಿ ಬಂದಿಲ್ಲ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಆಗ ಆಗಿನ ಪುರಸಭೆಯ ಆಡಳಿತಾಧಿಕಾರಿಗಳು ನಮ್ಮನ್ನು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡೋಣ ಬಾ ಎಂದು ನಮ್ಮನ್ನು ಕರೆದರು ಆಗ ನಾವು ಅವರಿಗೆ ತಿಳಿಸಿದ್ದೇನೆಂದರೆ ಈಗಾಗಲೇ 400-500 ಜನ ಸ್ಥಳದಲ್ಲಿ ಬಂದಿದ್ದು ಅವರು ನಮ್ಮೊಂದಿಗೆ ಜಗಳ ತೆಗೆಯಬಹುದು ಆದ ಕಾರಣ ನಾವು ಬರುವುದಿಲ್ಲ ನೀವಷ್ಟೆ ಹೋಗಿ ಬನ್ನಿ ಅಂತಾ ಅವರಿಗೆ

ತಿಳಿಸಿದೇವು, ಆಗ ಸದರಿ ಅಧಿಕಾರಿಯು ನಾನು ಸರ್ಕಾರಿ ಅಧಿಕಾರಿ ಇದ್ದು ಒಂದು ವೇಳೆ ಅವರೇನಾದರೂ ತೊಂದರೆ ಮಾಡುವುದಾದರೆ ನಾನು ಪೋಲಿಸರ ಸಹಾಯವನ್ನು ತೆಗೆದುಕೊಂಡು ನಿಮಗೆ ರಕ್ಷಣೆ ನೀಡುತ್ತೇನೆ ಆದ ಕಾರಣ ಎಲ್ಲರೂ ಹೋಗೋಣ ಬನ್ನಿ ಎಂದು ನಮ್ಮನ್ನು ಕರೆದರು, ಆಗ ನಾವು ಹೋಗೋಣ ಎಂದು ತಯಾರಾಗಿದ್ದೇವು, ಆಗ ಪುರಸಭೆಯ ಅಧ್ಯಕ್ಷರಾದ ಚಾಸಾಃ 36 ರವರನ್ನು ಸ್ಥಳಕ್ಕೆ ಬರಲು ಮುಖ್ಯ ಆಡಳಿತಾಧಿಕಾರಿಗಳು ತಿಳಿಸಿದ್ದು ಆಗ ಪುರಸಭೆ ಕಛೇರಿಯಿಂದ ಅಧ್ಯಕ್ಷರು, ಮುಖ್ಯ ಆಡಳಿತಾಧಿಕಾರಿಗಳು, ಸಿಬ್ಬಂದಿಗಳು ಹಾಗೂ ನಮ್ಮ ಸಮಾಜದ 30 ಜನರು ಅಲ್ಲಿಂದ ಗಾಂವಟಾನ ಜಾಗಕ್ಕೆ ಬಂದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಆಗ ಮುಖ್ಯಾಧಿಕಾರಿಗಳು ಗಾಂವಟಾನ ಜಾಗದಲ್ಲಿ ಕೆಲಸ ಮಾಡುತ್ತಿದ್ದಂತಹ ಜೈನ ಸಮಾಜದವರಿಗೆ ನಿಮಗೆ ಈಗಾಗಲೇ ನೋಟಿಸ ನೀಡಿದ್ದು ನೀವು ಇಲ್ಲಿ ಕಟ್ಟಡ ಕಟ್ಟಬಾರದೆಂದು ಇದ್ದು ನೀವು ಏಕೆ ಇಲ್ಲಿ ಕಟ್ಟಡ ಕಟ್ಟುತ್ತಿದ್ದಿರಿ ಎಂದು ಹೇಳಿದ್ದು ಆಗ ಅಲ್ಲಿದ್ದ ಜೈನ ಸಮಾಜದವರ ಪೈಕಿ 3–4 ಮಂದಿ ಎಂದರೆ ಪ್ರವೀಣ ಆದಪ್ಪಗೋಳ, ಅರಿಹಂತ ಬಾಬಣ್ಣವರ ಇನ್ನಿಬ್ಬರೂ ಸೇರಿ ಸದರಿ ಅಧಿಕಾರಿಗೆ ನೀನೇನು ಅಧಿಕಾರಿಯೋ ಈಗಾಗಲೇ ನಮ್ಮ ಹೆಸರಿನಲ್ಲಿ ಠರಾವು ಪಾಸು ಮಾಡಿಕೊಂಡಿದ್ದೇವೆ ನಿಮ್ಮ ಪುರಸಭೆ ಪುಸ್ತಕದಲ್ಲಿ ಆದೇಶ ಮೆರೆಯುತ್ತದೆ ನೀನು ಅಲ್ಲಿ ಹೋಗಿ ನೋಡು ಅಂತಾ ಹೇಳಿದರು ಹಾಗೂ ಈ ಮಾದರ ಸೂಳೆಮಕ್ಕಳ ಮಾತು ಕೇಳಿ ಇಲ್ಲಿ ಬಂದಿ ಏನು ಅಂತಾ ಅಂದರು, ಆಗ ನಮಗೂ ಸಹ ಈ ಮಾದರ ಸೂಳೆಮಕ್ಕಳು ಎಷ್ಟು ಕಾಡತಾ ಇದಿರಿ ಅಂತಾ ಅಂದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11. ಅಲ್ಲೇ ದಂಡೆಯ ಮೇಲೆ ಚಾಸಾಃ 32 ರವರು ನಿಂತುಕೊಂಡಿದ್ದು ಆತನ ಕಾಲು ಜಾರಿ ಆಗ ಜೈನ ಸಮಾಜದವರು ನಿಂತುಕೊಂಡಿದ್ದು ಆಗ ಕಲ್ಲುಗಳು ಕೆಳಗಡೆ ಉರುಳಿದವು ಆಗ ಏಕಾಏಕಿ ಜೈನ ಸಮಾಜದವರು ಎಲ್ಲರೂ ಸೇರಿ ಅವರನ್ನು ತೊಗೊಳ್ಳಿ ಅಂತಾ ಹೇಳಿದಾಗ

ಅವರ ಪೈಕಿ 4 ಜನರು ಮೇಲೆ ಬಂದು ಚಾಸಾಃ 1 ರವರ ಅಂಗಿ ಹಿಡಿದು ಜಗ್ಗಾಡಲು ಪ್ರಾರಂಭ ಮಾಡಿದ್ದು ಆಗ ನಾನು ಮಧ್ಯ ಹೋಗಿ ಬಿಡ್ರಿ ಬಿಡ್ರಿ ಅಂತಾ ಬಿಡಿಸಲು ಹೋದಾಗ 7 ನೇ ಆರೋಪಿ ಬಡಿಗೆ ತೆಗೆದುಕೊಂಡು ಬಂದು ನನ್ನ ತಲೆಯ ಮೇಲೆ ಹೊಡೆದರು, ಆಗ ನಾನು ಕೆಳಗೆ ಕುಳಿತು ತೆವಳುತ್ತಾ ಮುಂದೆ ಹೋಗಿ ರಸ್ತೆ ಬದಿಗೆ ಕುಳಿತುಕೊಂಡೆ, ಆಗ ಚಾಸಾಃ 1 ಇತನಿಗೆ ಹೊಡೆ ಬಡೆ ಮಾಡಲು ಪ್ರಾರಂಭ ಮಾಡಿದರು, ನನಗೆ ತಲೆಗೆ ಪೆಟ್ಟಾಗಿ ರಕ್ತ ಬರುತ್ತಿತ್ತು ನನ್ನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕೆಂದು ನಮ್ಮ ಮನೆಯವರು ನನ್ನನ್ನು ಮೋಟರಸೈಕಲ ಮೇಲೆ ಹಾರೂಗೇರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿ ವೈದ್ಯರು ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ನಾರಗೊಂಡ ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ಚಾಸಾಃ 1 ರವರು ಘಟನೆ ಬಗ್ಗೆ ಪೋಲಿಸರಿಗೆ ದೂರು ನೀಡಿರುತ್ತಾರೆ, ನಾನು ನಾರಗೊಂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಅಥಣಿ ಡಿ.ವೈ.ಎಸ್.ಪಿ ರವರು ಭೇಟಿ ಕೊಟ್ಟು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 1 ಹಾಗೂ ಇನ್ನೂಳಿದವರಿಗೆ ಗಾಯಗಳಾಗಿದ್ದು ಅವರನ್ನೂ ಸಹ ನಾರಗೊಂಡ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲು ಮಾಡಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಮ್.ಓ.1 ರಿಂದ ಶ್ರೀಕಾಂತ ಬಾಬಣ್ಣರವರು ನನ್ನ ತಲೆಗೆ ಹಲ್ಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ನಾನು ವಿದ್ಯಾವಂತ ಇದ್ದೇನೆ ಎಂದು ತಿಳಿದು ಒಂದು ಖೊಟ್ಟಿ ದೂರನ್ನು ಮತ್ತು ಹೇಳಿಕೆಯನ್ನು ಸೃಷ್ಟಿ ಮಾಡಿದ್ದು ಅವುಗಳನ್ನು ಓದಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**3 ರಿಂದ 9, 11 ರಿಂದ 14, 16 ರಿಂದ 20, 22 ರಿಂದ 28, 31 ರಿಂದ 34 ನೇ ಆರೋಪಿತರ ಪರವಾಗಿ ಶ್ರೀ ಎ.ಬಿ.ಬಿ .ವಕೀಲರಿಂದ**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 9, 11 ರಿಂದ 14, 16 ರಿಂದ 20, 22 ರಿಂದ 28, 31 ರಿಂದ 34 ನೇ ಆರೋಪಿತರ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.